FDP No.10/2021
RW-2 ಕೃಷ್ಣಮೂರ್ತಿ
2 ನೇ ಎದುರುದಾರರು
Date: 29.06.2026

**<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಜಿ ಎಸ್ ವಕೀಲರಿಂದಃ</u>**

3 ನೇ ಎದುರುದಾರರಾದ ಕರಿಯಣ್ಣ 1 ನೇ ಎದುರುದಾರರಾದ ಯರಪ್ಪ ರವರ ಮಗಳಾದ ಸುಶೀಲಮ್ಮ ರವರ ಗಂಡ ಎಂದರೆ ಸರಿ. ಅವರು ನನ್ನ ಹತ್ತಿರದ ಸಂಬಂದಿ ಎಂದರೆ ಸರಿ. ಸಾಕ್ಷಿ ಆದರೆ ನಾವು ದೂರ ದೂರ ಇದ್ದೆವು ಎಂದು ನುಡಿದಿರುತ್ತಾರೆ. ಬೊಮ್ಮಸಮುದ್ರ ಗ್ರಾಮದಲ್ಲಿ ಸುಮಾರು 400 ಗ್ರಾಮಗಳು ಇವೆ. ರಾಮಪ್ಪ ಮತ್ತು ನಮ್ಮಗಳ ನಡುವೆ ಅರ್ಜಿ ನಡೆಯುತ್ತಿದ್ದ ವಿಚಾರ ನಮ್ಮ ಗ್ರಾಮದ ಎಲ್ಲಾ ಜನರಿಗೂ ತಿಳಿದಿತ್ತು ಎಂದರೆ ಸರಿಯಲ್ಲ. 2014 ರಿಂದ 2020 ರವರೆಗೆ ಬರಗಾಲ ಇತ್ತು ಎಂದು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ನನಗೆ ಸೇರಿದ ಸಾವಿರ ಕುರಿಗಳು ಇವೆ ಎಂದರೆ ಸರಿಯಲ್ಲ. ನನಗೆ ಸೇರಿದ ಯಾವುದೇ ಎತ್ತು, ದನ, ಕರುಗಳು ಇರುವುದಿಲ್ಲ. ನನಗೆ ಸೇರಿದ ಯಾವುದೇ ಟ್ರಾಕ್ಟರ್ ಇರುವುದಿಲ್ಲ ನನಗೆ ಕುರಿಗಳು ಇದ್ದರು ಕೂಡ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಲಕಸುಬು ಕುರಿ ಮೇಯಿಸುವುದು ಎಂದರೆ ಸರಿ. ಸಾಕ್ಷಿ ಮುಂದುವರೆದು ಆದರೆ ನಾವು ಕುರಿ ಮೇಯಿಸುವುದಿಲ್ಲ ಎಂದು ನುಡಿದಿರುತ್ತಾರೆ. 2016 ರಲ್ಲಿ ನಾವು ಬ್ಯಾಂಕಿನಿಂದ ಸಾಲವನ್ನು ಪಡೆದಿದ್ದೆವು. ನಾವು 8 ಲಕ್ಷ ರೂಪಾಯಿ ಸಾಲವನ್ನು ಪಡೆದುಕೊಂಡಿದ್ದೆವು. ನಾವು ಯಾವುದೇ ಸಾಲವನ್ನು ಮರುಪಾವತಿ ಮಾಡಿರಲಿಲ್ಲ. ಅರ್ಜಿ ಸ್ವತ್ತನ್ನು ಹೊರತುಪಡಿಸಿ ಬೇರೆ ಎರಡು ಜಮೀನುಗಳು ಇವೆ. ಅದರ ಸರ್ವೆ ನಂ.76 ಮತ್ತು 66 ಆಗಿರುತ್ತದೆ. ಸನಂ.76 ರಲ್ಲಿ 12 ಎಕರೆ ಮತ್ತು ಸನಂ.66 ರಲ್ಲಿ 7 ಎಕರೆ ಜಮೀನು ಇದೆ.

ಸದರಿ ಎರಡು ಜಮೀನುಗಳು ಬೊಮ್ಮ ಸಮುದ್ರ ಗ್ರಾಮಕ್ಕೆ ಹೊಂದಿಕೊಂಡು ಇವೆ ಎಂದರೆ ಸರಿಯಲ್ಲ. ಸದರಿ ಜಮೀನುಗಳಲ್ಲಿ ಸಾಕಷ್ಟು ಬೆಳೆ ಬೆಳೆಯುತ್ತೇವೆ ಮತ್ತು ಅದಾಯ ಇದೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ರಾಗಿ ಮತ್ತು ಭತ್ತವನ್ನು ಬೆಳೆಯುತ್ತೇವೆ ನಮ್ಮ ಕುಟುಂಬಕ್ಕೆ ಆಗವಷ್ಟು ಬೆಳೆಯನ್ನು ಬೆಳೆಯುತ್ತೇವೆ ಎಂದರೆ ಸರಿಯಲ್ಲ. ಭತ್ತ ಮತ್ತು ರಾಗಿ ಬೆಳೆಯಲು ನಿರಾವರಿ ವ್ಯವಸ್ಥೆ ಇರಬೇಕು ಎಂದರೆ ಸರಿ.

ನಾವು ಪ್ರತಿ ವರುಷ ಸಾಕಷ್ಟು ಬೆಳೆಗಳನ್ನು ಬೆಳೆಯುತ್ತೇವೆ ಎಂದರೆ ಸರಿಯಲ್ಲ. ನಮ್ಮ ಗ್ರಾಮದಲ್ಲಿ ನಮ್ಮ ಕುಟುಂಬ ಶ್ರೀಮಂತ ಕುಟಂಬ ಎಂದರೆ ಸರಿಯಲ್ಲ. ಮಳೆ ಬರದೇ ನಮಗೆ ಎಷ್ಟು ಲುಕ್ಸಾನು ಆಯಿತು ಎಂದು ನನಗೆ ಹೇಳಲಾಗುವುದಿಲ್ಲ.

ನನ್ನ ತಂದೆ ಸಣ್ಣಪ್ಪ ರವರ ಹತ್ತಿರ 5 ಲಕ್ಷ, ನಾಗಣ್ಣ ರವರ ಹತ್ತಿರ 5 ಲಕ್ಷ ಮತ್ತು ಹನುಮಂತಪ್ಪ ರವರ ಹತ್ತಿರ 5 ಲಕ್ಷ ರೂಪಾಯಿ ಸಾಲವನು ಪಡೆದುಕೊಂಡಿದ್ದರು. ಸಣ್ಣಪ್ಪ, ನಾಗಪ್ಪ ಮತ್ತು ಹನುಮಂತಪ್ಪ ರವರು ಕೂಡ ರೈತರಾಗಿರುತ್ತಾರೆ. ಅವರು ರೈತಾಪಿಯಿಂದ ಬಂದ ಹಣದಿಂದ ನನ್ನ ತಂದೆಗೆ ಸಾಲವನ್ನು ನೀಡಿದ್ದರು. ಅವರು ಯಾವ ತಾರೀಖು ತಿಂಗಳು ಇಸವಿಯಂದು ನನ್ನ ತಂದೆಗೆ ಸಾಲವನ್ನು ನೀಡಿದ್ದರು ಎಂದು ನನಗೆ ಹೇಳಲಾಗುವುದಿಲ್ಲ. ಸಾಲ ಕೊಟ್ಟ ಬಗ್ಗೆ ಆಗಲಿ ಸಾಲ ಮರುಪಾವತಿ ಮಾಡಿದ ಬಗ್ಗೆ ಆಗಲಿ ನಾನು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸರಿ. ನನ್ನ ತಂದೆ ಅವರ ಬಳಿ ಸಾಲವನ್ನು ಮಾಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಲವನ್ನು ತಿರುವಳಿ ಮಾಡಲು ಬ್ಯಾಂಕಿನಲ್ಲಿ ಸಾಲ ಮಾಡಬೇಕಾಯಿತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬ್ಯಾಂಕಿನಿಂದ ಆಸ್ತಿ ಮಾರಾಟದ ಬಗ್ಗೆ ನೋಟಿಸು ನೀಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬ್ಯಾಂಕಿನವರು ನಮ್ಮ ವಿರುದ್ಧ ಸಿವಿಲ್ ನ್ಯಾಯಾಲಯದಲ್ಲಿ ಯಾವುದೇ ದಾವೆಯನ್ನು ಹೂಡಿರಲಿಲ್ಲ. ನೋಟಿಸ್ ಬಂತು ಮತ್ತು ನೋಟಿಸ್ ವಿಚಾರವನ್ನು ನನಗೆ ಗ್ರಾಮಸ್ಥರು ತಿಳಿಸಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನನ್ನು ಮಾರಾಟ ಮಾಡಲು ನಾವು ತಯಾರಾದೆವು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಜಮೀನು ಕೆ ಎಸ್ ಆರ್ ಟಿ ಸಿ ಡಿಪೋ ಬಳಿ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 4-5 ಕಿಮೀ ದೂರದಲ್ಲಿದೆ ಎಂದು ನುಡಿದಿರುತ್ತಾರೆ. ಜಮೀನು ಬೊಮ್ಮಸಮುದ್ರ ದಿಕ್ಕಿನ ದಕ್ಷಿಣ ಮತ್ತು ಪಶ್ಚಿಮ ದಿಕ್ಕಿನ ನಡುವೆ ಇದೆ ಎಂದರೆ ಸರಿಯಲ್ಲ. ಸದರಿ ಜಮೀನು ಬೊಮ್ಮಸಮುದ್ರ ಮತ್ತು ಚಳ್ಳಕೆರೆಯ ಮಧ್ಯಭಾಗದಲ್ಲಿದೆ. ಚಳ್ಳಕೆರೆಯಿಂದ ಬೊಮ್ಮಸಮುದ್ರ ಗ್ರಾಮ 6 ಕಿಮೀ ಅಂತರದಲ್ಲಿದೆ. ಚಳ್ಳಕೆರೆಯಿಂದ ಕೆ ಎಸ್ ಆರ್ ಟಿ ಸಿ ಡಿಪೋ 3 ಕಿಮೀ ಅಂತರದಲ್ಲಿದೆ. ಅರ್ಜಿ ಸ್ವತ್ತು ಕೆ ಎಸ್ ಆರ್ ಟಿ ಸಿ ಡಿಪೋ ಬಳಿ ಇದ್ದರು ಕೂಡ ನಾನು ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅರ್ಜಿ ಸ್ವತ್ತಿನ ಮಾರುಕಟೆ ಬೆಲೆ ಒಂದೂವರೆ ಕೋಟಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಸುತ್ತಮುತ್ತಲೂ ಸೈಟ್ ನಿರ್ಮಾಣವಾಗಿವೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಹತ್ತಿರದಲ್ಲಿ ಮೋರಾರ್ಜಿ ಶಾಲೆ ಇದೆ ಎಂದರೆ ಸರಿಯಲ್ಲ.

ಗ್ರಾಮಸ್ಥರಾದ ಜಗದೀಶ ಮತ್ತು ರಂಗಣ್ಣ ರವರಿಗೆ ನಾನು ಜಮೀನನ್ನು ಮಾರಾಟ ಮಾಡುವ ಉದ್ದೇಶವನ್ನು ಹೇಳಿದೆನು ಮತ್ತು ಅವರು ಕರಿಯಣ್ಣ ರವರಿಗೆ ಜಮೀನನ್ನು ಖರೀದಿಸುವಂತೆ ತಿಳಿಸಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬ್ಯಾಂಕ್ ಸಾಲವನ್ನು ತೀರಿಸುವ ಸಲುವಾಗಿ ಕರಿಯಣ್ಣ ರವರಿಗೆ ಜಮೀನನ್ನು ಖರೀದಿಸುವಂತೆ ಅವರು ಕೇಳಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಕರಿಯಣ್ಣ ರವರು ಜಮೀನನ್ನು ಖರೀದಿ ಮಾಡಿ ಸಾಲವನ್ನು ತೀರಿಸುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬ್ಯಾಂಕ್ ಸಾಲವನ್ನು ಮರುಪಾವತಿ ಮಾಡಲು ನಾವುಗಳು ಕರಿಯಣ್ಣ ರವರಿಗೆ 11 ಲಕ್ಷ ರೂಪಾಯಿಗಳಿಗಾಗಿ ದಿನಾಂಕ 17.12.2021 ರಂದು ಅರ್ಜಿ ಸ್ವತ್ತನ್ನು ಮಾರಾಟ ಮಾಡಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪತ್ರವನ್ನು ನಾವುಗಳು ಸೃಷ್ಟಿ ಮಾಡಿದ ಪತ್ರವಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮಗಳ ನಡುವೆ ಯಾವುದೇ ಹಣದ ಲೇವಾದೇವಿ ಆಗಿರುವುದಿಲ್ಲ ಮತ್ತು ನಾವು ಯಾವುದೇ ಜಮೀನನ್ನು 3 ನೇ ಎದುರುದಾರರಿಗೆ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ರಾಮಪ್ಪ ರವರ ಒಪ್ಪಿಗೆ ಮೇರೆಗೆ ನಾವು ಜಮೀನನ್ನು 3 ನೇ ಎದುರುದಾರರಿಗೆ ಮಾರಾಟ ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕುಟುಂಬದ ಸಾಲವನ್ನು ಮರುಪಾವತಿ ಮಾಡಲು ಅರ್ಜಿ ಸ್ವತ್ತನ್ನು ಮಾರಾಟ ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರು ಕೂಡ ಅರ್ಜಿ ಸ್ವತ್ತಿನಲ್ಲಿ ಅರ್ದ ಭಾಗ ಹಕ್ಕು ಇದೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಅರ್ಜಿ ಇತ್ಯರ್ಥಕ್ಕೆ ಬಾಕಿ ಇದ್ದ ಕಾರಣ ನನಗಾಗಲಿ 1 ನೇ ಎದುರುದಾರರಿಗಾಗಲಿ ಜಮೀನನ್ನು ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಿಆರ್ 1 ನಾಮಕಾವಸ್ಥೆ ಸೃಷ್ಟಿ ಮಾಡಿದ ಪತ್ರವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಪತ್ರದ ಅಡಿಯಲ್ಲಿ ಯಾರಿಗೂ ಕೂಡ ಯಾವ ಹಕ್ಕು ಪ್ರಾಪ್ತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಕೇಸಿನ ವಿಚಾರ ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ಅರ್ಜಿಯನ್ನು ಸಲ್ಲಿಸಿದ ನಂತರ ರಾಮಪ್ಪ ರವರಿಗೆ ಯಾವುದೇ ಹಕ್ಕು ಪ್ರಾಪ್ತಿಯಾಗಬಾರದು ಎನ್ನುವ ಕಾರಣಕ್ಕಾಗಿ ದಿನಾಂಕ 17.12.2021 ರಂದು ಕ್ರಯಪತ್ರವನ್ನು ಸೃಷ್ಟಿ ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿ ನಮ್ಮ ಅಳಿಯ ಕರಿಯಣ್ಣ ರವರಿಗೆ ನಾವು ಕ್ರಯ ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

1 ನೇ ಎದುರುದಾರರು ಈಗ ಜೀವಂತವಾಗಿ ಇದ್ದಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸಲ್ಲಿಸಿದ ಅಂಶಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ

RW-1 ಕರಿಯಣ್ಣ

3 ನೇ ಎದುರುದಾರರು

Date: 29.06.2026

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಜಿ ಎಸ್ ವಕೀಲರಿಂದಃ**

ಮೂಲದಾವೆಯನ್ನು ಅರ್ಜಿದಾರರು ಸಲ್ಲಿಸಿದಾಗಿನಿಂದಲೂ ಕೂಡ ನಾನು 1 ಮತ್ತು 2 ನೇ ಎದುರುದಾರರ ತಂದೆ ಕದುರುಪ್ಪ ರವರೊಂದಿಗೆ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1 ನೇ ಎದುರುದಾರರ ಮಗಳಾದ ಸುಶೀಲಮ್ಮ ರವರಿಗೆ ಮದುವೆಯಾಗಿರುತ್ತೇನೆ ಎಂದರೆ ಸರಿ. 2003 ರಿಂದ ಈವರೆಗೆ ಅರ್ಜಿದಾರರು ಮತ್ತು 1 ಮತ್ತು 2 ನೇ ಎದುರುದಾರರ ನಡುವೆ ಆದಂತಹ ಎಲ್ಲಾ ಪ್ರಕರಣದ ವಿದ್ಯಾಮಾನಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಎದುರುದಾರರಿಗೆ ಅರ್ಜಿಯಲ್ಲಿ ಕಾಣಿಸಿದ ಷೆಡ್ಯೂಲ್ ಸ್ವತ್ತುಗಳನ್ನು ಹೊರತುಪಡಿಸಿ ಬೇರೆ ಇವೆ ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವೆ 94/2003 ರಲ್ಲಿ ಅರ್ಜಿ ಸ್ವತ್ತನ್ನು ಹೊರತುಪಡಿಸಿ ಬೇರೆ ಸ್ವತ್ತುಗಳು ಕೂಡ ಇದ್ದವು ಎಂದರೆ ನನಗೆ ಗೊತ್ತಿಲ್ಲ. ನನಗೆ ಅಸಲು ದಾವೆ 94/2003 ಮತ್ತು ಎಫ್ ಡಿ ಪಿ.4/2012 ರ ಬಗ್ಗೆ ಮಾಹಿತಿ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಜಗದೀಶ ಮತ್ತು ರಂಗಣ್ಣ ರವರು ನನಗೆ 2021 ರ ದೀಪಾವಳಿ ಸಮಯದಲ್ಲಿ ಕರೆದಿದ್ದರು. ಯಾವ ತಾರೀಖು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ರಂಗಪ್ಪ ಮತ್ತು ಕೆಂದಣ್ಣ ರವರು ನನ್ನ ಕುಟುಂಬದ ಸದಸ್ಯರಾಗಿರುವುದಿಲ್ಲ. ಅವರು ಜೀವಂತವಾಗಿ ಇದ್ದಾರೆ. ಅವರು ನನಗೆ ಕರೆದು ಈ ಅರ್ಜಿಯ 1 ಮತ್ತು 2 ನೇ ಎದುರುದಾರರಿಂದ ಅರ್ಜಿ ಸ್ವತ್ತನ್ನು ಖರೀದಿಸುವಂತೆ ನನಗೆ ಕೇಳಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಣೇಕೆರೆ ಹಿನ್ನೀರು ಬೊಮ್ಮಸಮುದ್ರಕ್ಕೆ ಬರುತ್ತದೆ ಎಂದರೆ ಸರಿಯಲ್ಲ. ಬೊಮ್ಮಸಮುದ್ರದಿಂದ ರಾಣೀಕೆರೆಯ ನೀರು ಕಾಣುತ್ತದೆ ಎಂದರೆ ಸರಿ. ನಮ್ಮ ಗ್ರಾಮದಲ್ಲಿ ಸುಮಾರು ನೂರಾರು ವರುಷಗಳ ಅಡಿಕೆ ಮರಗಳು ಇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 10-15 ವರುಷಗಳ ಅಡಿಕೆ ಮರಗಳು ಇವೆ ಎಂದು ನುಡಿದಿರುತ್ತಾರೆ. ಭರಮಸಾಗರ ನಮ್ಮ ಗ್ರಾಮದಿಂದ 2 ಕಿಮೀ ಅಂತರದಲ್ಲಿದೆ. ಭರಮಸಾಗರದಲ್ಲಿಯೂ ಕೂಡ ಸಾಕಷ್ಟು ಅಡಿಕೆ ಮರಗಳು ಇವೆ ಎಂದರೆ ಸರಿ.

ಅಲ್ಲಿ ಸುಮಾರು 50–60 ವರುಷಗಳ ಹಳೆಯ ಅಡಿಕೆ ಮರಗಳು ಇವೆ ಎಂದರೆ ಸಾಕ್ಷಿ ಸುಮಾರು 20 ವರುಷಗಳ ಅಡಿಕೆ ಮರಗಳು ಇವೆ ಎಂದು ನುಡಿದಿರುತ್ತಾರೆ. ಬರಗಾಲದಿಂದ ನಮ್ಮ ಗ್ರಾಮದ ಮರಗಳು ಭತ್ತಿ ಹೋಗಿದ್ದವು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಕಲಾಪಗಳ ಬಗ್ಗೆ ನನಗೆ ಅನುಭವ ಇದೆ ಎಂದರೆ ಸರಿಯಲ್ಲ. ನಮ್ಮ ಗ್ರಾಮಸ್ಥರು ಅರ್ಜಿ ಸ್ವತ್ತನ್ನು ಖರೀದಿ ಮಾಡುವಂತೆ ನನಗೆ ತಿಳಿಸಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬ್ಯಾಂಕ್ ಸಾಲ ತೀರಿಸಲು ಜಮೀನು ಮಾರಾಟ ಮಾಡುತ್ತಿದ್ದಾರೆ ಎಂದು ನನಗೆ 1 ಮತ್ತು 2 ನೇ ಎದುರುದಾರರು ನನಗೆ ತಿಳಿಸಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, 1 ಮತ್ತು 2 ನೇ ಎದುರುದಾರರೊಂದಿಗೆ ಷರಿಕ್ಕಾಗಿ ಅರ್ಜಿದಾರರಾದ ರಾಮಪ್ಪ ರವರಿಗೆ ಯಾವುದೇ ಸ್ವತ್ತನ್ನು ಕೊಡಬಾರದು ಎನ್ನುವ ದುರುದ್ದೇಶದಿಂದ ಸುಳ್ಳು ಕ್ರಯಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಎದುರುದಾರರು ನನಗೆ ಶುದ್ಧಕ್ರಯಕ್ಕೆ ಅರ್ಜಿ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ಅದನ್ನು ಕುಟುಂಬದ ಅವಶ್ಯಕತೆಗಾಗಿ ಮಾರಾಟ ಮಾಡಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿ ಸ್ವತ್ತು ಬೆದ್ದಲು ಜಮೀನು ಆಗಿರುತ್ತದೆ. ಚಳ್ಳಕೆರೆಯ ಪಾವಗಡ ರಸ್ತೆಯಲ್ಲಿ ಕೆ ಎಸ್ ಆರ್ ಟಿ ಸಿ ಡಿಪೋ ಇದೆ ಎಂದರೆ ಸರಿ. ಡಿಪೋ ಪಕ್ಕದಲ್ಲಿಯೇ ಅರ್ಜಿ ಸ್ವತ್ತು ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 10 ಕಿಮೀ ಅಂತರದಲ್ಲಿದೆ ಎಂದು ನುಡಿದಿರುತ್ತಾರೆ. ಸದರಿ ಜಮೀನು ಕೆ ಎಸ್ ಆರ್ ಟಿ ಸಿ ಡಿಪೋ  ಗೆ ಹತ್ತಿರದಲ್ಲಿಯೇ ಇರುವ ಜಮೀನು ಎಂದರೆ ಸರಿಯಲ್ಲ. ಬೊಮ್ಮಸಮುದ್ರ ಗ್ರಾಮ ಚಳ್ಳಕೆರೆಯಿಂದ 6 ಕಿಮೀ ಅಂತರದಲ್ಲಿದೆ. ಚಳ್ಳಕೆರೆ ಡಿಪೋ ನಮ್ಮ ಗ್ರಾಮದಿಂದ 4 ಕಿಮೀ ಅಂತರದಲ್ಲಿದೆ. ದಾವಾ ಅರ್ಜಿಯ ಸ್ವತ್ತಿನ ಇಂದಿನ ಮಾರುಕಟ್ಟೆ ಬೆಲೆ 1 ಎಕರೆಗೆ ಒಂದೂವರೆ ಕೋಟಿ ಇದೆ ಎಂದರೆ ಸರಿಯಲ್ಲ. ಇಂದಿನ ಮಾರುಕಟ್ಟೆ ಬೆಲೆ ಎಷ್ಟು ಇದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಖುಷ್ಕಿ ಜಮೀನಿನ ಬೆಲೆ 1 ಲಕ್ಷದ 20 ಸಾವಿರ ರೂಪಾಯಿ ಆಗುತ್ತದೆ. ಜಮೀನು ಚಳ್ಳಕೆರೆಯ ಗಡಿಭಾಗ ಅಂದರೆ ಕೆ ಎಸ್ ಆರ್ ಟಿ ಸಿ ಡಿಪೋಗೆ ಹೊಂದಿಕೊಂಡು ಇದ್ದರು ಕೂಡ ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಪಕ್ಕದಲ್ಲಿ housing board ಕಾಲೋನಿ ಸೈಟ್ ನಿರ್ಮಾಣವಾಗಿದೆ ಎಂದರೆ ಸರಿಯಲ್ಲ. ನನಗೆ ಓದು ಬರಹ ಬರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಎಲ್ಲಾ ದಾಖಲಾತಿಗಳನ್ನು ಪರಶೀಲಿಸಿ ನ್ಯಾಯಯುತ ರೀತಿಯಲ್ಲಿ ಜಮೀನನ್ನು ಖರೀದಿ ಮಾಡಿದ್ದೇನೆ  ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕುಟುಂಬದ ಸಾಲವನ್ನು ಮರುಪಾವತಿ ಮಾಡಲು ಜಮೀನನ್ನು ನನಗೆ ಮಾರಾಟ ಮಾಡಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥಕ್ಕೆ ಬಾಕಿ ಇರುವ ವಿಚಾರ ನನಗೆ ತಿಳಿದಿದ್ದರು ಕೂಡ 1 ಮತ್ತು 2 ನೇ ಎದುರುದಾರರು ನನ್ನ ಸಂಬಂದಿಕರಾದ ಕಾರಣ ಕ್ರಯಪತ್ರವನ್ನು ಸೃಷ್ಟಿ ಮಾಡಿಲಾಗಿದೆ ಎಂದರೆ ಸರಿಯಲ್ಲ. ಅರ್ಜಿ ಸ್ವತ್ತನ್ನು ಮಾರಾಟ ಮಾಡುವ ಅಧಿಕಾರ 1 ಮತ್ತು 2 ನೇ ಎದುರುದಾರರಿಗೆ ಇತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ಸ್ವಾಧೀನ ಅನುಭವದಲ್ಲಿ ಇದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1 ಮತ್ತು 2 ನೇ ಎದುರುದಾರರ ಅಳಿಯನಾದ ಕಾರಣ ಕ್ರಯಪತ್ರದಲ್ಲಿ ಆದ ಯಾವುದೇ ಮಾರಾಟದ ಹಣವನ್ನು ನಾನು ಅವರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿ ಸ್ವತ್ತಲ್ಲಿ ರಾಮಪ್ಪ ರವರಿಗೂ ಕೂಡ ಅರ್ದ ಭಾಗ ಇದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಅನ್ಯಾಯ ಮಾಡಲು ಲೋನ್ ಬಗ್ಗೆ ಅಂಶವನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಯಾವುದೇ ಸಾಲವನ್ನು ಕುಟುಂಬದ ಅವಶ್ಯಕತೆಗಾಗಿ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಆರ್ 1 ದಾಖಲಾತಿ ಸೃಷ್ಟಿ ಮಾಡಿದ ಕ್ರಯ ಪತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ಜಮೀನನ್ನು ಖರೀದಿ ಮಾಡಿದ ನಂತರ ಅದನ್ನು ಅಭಿವೃದ್ದಿ ಗೊಳಿಸಿದ್ದೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರ ಆಂಗ್ಲ ಭಾಷೆಯಲ್ಲಿ ಇರುವ ಕಾರಣ ಅದರಲ್ಲಿ ಬರೆದಿರುವ ಅಂಶ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸುಳ್ಳಿನಿಂದ ಕೂಡಿದ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಎದುರುದಾರರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ